ಸಾತನೂರು ಕ್ಷೇತ್ರದಲ್ಲಿರುವ ಶಾಲಾವಾರು ಶಿಕ್ಷಕರುಗಳ ಸಂಖ್ಯೆ

ಶಾಲೆಯ ಹೆಸರು	ಶಿಕ್ಷಕರ ಸಂಖ್ಯೆ
1. ಸರ್ಕಾರಿ ಪ್ರೌಢಶಾಲೆ, ಬ್ಯಾಡರ ಹಳ್ಳಿ, ಚೆನ್ನಪಟ್ಟಣ ತಾಲ್ಲೂಕು	02
2. ಸರ್ಕಾರಿ ಪ್ರೌಢಶಾಲೆ, ಕೋಡಂಬಳ್ಳಿ, ಚೆನ್ನಪಟ್ಟಣ ತಾಲ್ಲೂಕು	07
3. ಸರ್ಕಾರಿ ಪ್ರೌಢಶಾಲೆ, ದೊಡ್ಡಆಲಹಳ್ಳಿ, ಕನಕಪುರ ತಾಲ್ಲೂಕು	02
4. ಸರ್ಕಾರಿ ಪ್ರೌಢಶಾಲೆ, ಹೂಕುಂದ, ಕನಕಪುರ ತಾಲ್ಲೂಕು	04
5. ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ, ಕನಕಪುರ ತಾಲ್ಲೂಕು	10
6. ಸರ್ಕಾರಿ ಪ್ರೌಢಶಾಲೆ, ಚೀರಿಂದ್ಯಾಪನಹಳ್ಳಿ, ಕನಕಪುರ ತಾಲ್ಲೂಕು	08
7. ಭಾರತ ಮಾತಾ ಪ್ರೌಢಶಾಲೆ, ಸಿಂಗರಾಜಪುರ, ಕನಕಪುರ ತಾಲ್ಲೂಕು	08
8. ಮಹಾಲಿಂಗೇಶ್ವರ ಸ್ವಾಮಿ ಪ್ರೌಢಶಾಲೆ, ಹುಣಸನಹಳ್ಳಿ ಕನಕಪುರ ತಾಲ್ಲೂಕು	08
9. ಶ್ರೀ ರಾಮ ಪ್ರೌಢಶಾಲೆ, ಹೊಸದುರ್ಗ, ಕನಕಪುರ ತಾಲ್ಲೂಕು	08
10. ವಿಶ್ವೋದಯ ಪ್ರೌಢಶಾಲೆ, ಕೃಷ್ಣಯ್ಯನದೊಡ್ಡಿ, ಕನಕಪುರ ತಾಲ್ಲೂಕು.	08
11. ಆರ್. ಸಿ. ಪ್ರೌಢಶಾಲೆ, ಹಾರೋಬೆಲೆ ಕನಕಪುರ ತಾಲ್ಲೂಕು	06
12. ಶಾರದಾ ಪ್ರೌಢಶಾಲೆ, ಕೋಡಿಹಳ್ಳಿ, ಕನಕಪುರ ತಾಲ್ಲೂಕು	11
13. ಸ್ವರಾಜ್ಯ ಪ್ರೌಢಶಾಲೆ, ಐನೋರಗೊಲ್ಲಹಳ್ಳಿ, ಕನಕಪುರ ತಾಲ್ಲೂಕು	06
14. ಡಾ. ಬಿ.ಆರ್.ಅಂಬೇಡಕರ್ ಪ್ರೌಢಶಾಲೆ ಹೊಸಕಬ್ಬಾಳು ಕನಕಪುರ ತಾ	07
15. ಗ್ರಾಮಾಂತರ ಪ್ರೌಢಶಾಲೆ, ಸಾತನೂರು, ಕನಕಪುರ ತಾ:	14
ಒಟ್ಟು	109

ಅಧ್ಯಕ್ಷರು : ಮಂಡಿಸಲಾಯಿತು. ಇನ್ನು ವರದಿಯನ್ನು ಒಪ್ಪಿಸುವುದು.

ವರದಿಯನ್ನೊಪ್ಪಿಸುವುದು

ಶ್ರೀ ಆರ್. ಎನ್. ನಾಯ್ಕ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ): ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಪರವಾಗಿ 16ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು •ಮಂಡಿಸಲಾಯಿತು.

ಅಧ್ಯಕ್ಷರು : ಒಂದು ಪ್ರಕಟಣೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೋ.ರು. ಚನ್ನಬಸಪ್ಪ ಒಂದು ಪತ್ರ ಬಂದಿದೆ. ಅದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

ಪ್ರಕಟಣೆ

ಶ್ರೀ ವಿ.ಎಸ್.ಕೌಜಲಗಿ ಅವರಲ್ಲಿ ಪ್ರಣಾಮಗಳು

ದಿನಾಂಕ 14-2-94 ರಂದು ವಿಧಾನಸಭೆಯ ಅಧಿವೇಶನದಲ್ಲಿ ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಡೆದಿರುವ ಪ್ರಸ್ತಾಪದ ಬಗ್ಗೆ ದಿನಾಂಕ 15-2-94ರ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಸಂಬಂಧ ತಮ್ಮಲ್ಲಿ ಕೆಳಕಂಡ ಸ್ಪಷ್ಟೀಕರಣ ನೀಡಬಯಸುತ್ತೇನೆ.

ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ಸೇರಿದ್ದ ಭಾರೀ ಪ್ರಮಾಣದ ಜನಸಂದಣಿ ಮಧ್ಯೆ ನಮ್ಮ ಗಮನಕ್ಕೆ ಬಾರದೆ ನಿರೂಪಕರೊಬ್ಬರು ವೇದಿಕೆಯಲ್ಲಿ ಪ್ರಕಟಣೆ ನೀಡಿ ಕೆಲವು ಶಾಸಕರುಗಳಿಗೆ ನೋವುಂಟು ಮಾಡಿರುವುದು ನಿಜ. ಈ ವಿಷಯ ತಿಳಿದು ಸ್ವಾಗತ ಸಮಿತಿಯ ಅಧ್ಯಕ್ಷರು ಪತ್ರಕರ್ತರೊಡನೆ ಮಾತನಾಡಿದಾಗ ಅಂದೇ ಕ್ಷಮೆ ಕೇಳಿದ್ದಾರೆ. ವೇದಿಕೆಯ ಮೇಲೂ ಇದನ್ನು ಪ್ರಕಟಿಸಿದ್ದಾರೆ.

ಸಮಾರಂಭ ಸಕಾಲದಲ್ಲಿ ಆರಂಭವಾಗಬೇಕಾಗಿತ್ತು. ಬೇಸರಗೊಂಡು ಹೋದ ಶಾಸಕರನ್ನು ಮತ್ತೆ ಕರೆಸಬೇಕೆನ್ನುವಷ್ಟರಲ್ಲಿ ಅವರು ಸ್ಥಳ ಬಿಟ್ಟಿದ್ದರಿಂದ ಮುಖತಃ ಅವರ ಕ್ಷಮೆ ಕೋರಲು ಆಗಲಿಲ್ಲ. ಇದರಲ್ಲಿ ಅವರಿಗೆ ಅವಮಾನ ಉಂಟು ಮಾಡಬೇಕೆಂಬ ಉದ್ದೇಶ ಸಾಹಿತ್ಯ ಪರಿಷತ್ತಿಗಾಗಲೀ, ಸ್ವಾಗತ ಸಮಿತಿಗಾಗಲೀ ಇರಲಿಲ್ಲ. ಈ ಘಟನೆ ಆಕಸ್ಮಿಕವಾಗಿ ಜರುಗಿ ಹೋಯಿತು. ಇದಕ್ಕಾಗಿ ಪರಿಷತ್ತಿಗೂ ತುಂಬಾ ವ್ಯಸನವೆನಿಸಿದೆ. ಇದಕ್ಕಾಗಿ ನಾನು ಮತ್ತೊಮ್ಮೆ ಮಾನ್ಯ ಶಾಸಕರಲ್ಲಿ ಕ್ಷಮೆ ಕೋರುತ್ತಿದ್ದೇನೆ.

ಶಾಸಕರು, ಸಾಹಿತಿಗಳು, ಸ್ವಾಗತ ಸಮಿತಿಯವರು ಮತ್ತು ಇತರ ವಿಶೇಷ ಆಹ್ವಾನಿತರಿಗೆ ಪ್ರತ್ಯೇಕ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸಹಸ್ರಾರು ಜನರು ಪ್ರವಾಹದಂತೆ ಸಮ್ಮೇಳನ ಮಂಟಪಕ್ಕೆ ಬಂದ ಕಾರಣ ಆಸನಗಳ ವ್ಯವಸ್ಥೆಯಲ್ಲಿ ಅಸ್ತವ್ಯಸ್ತತೆ ಉಂಟಾಯಿತು. ದೊಡ್ಡ ಪ್ರಮಾಣದ ಕಾರ್ಯಗಳನ್ನು ಮಾಡುವಾಗ ಆಕಸ್ಮಿಕವಾಗಿ ಸಂಭವಿಸುವ ಇಂತಹ ಪ್ರಮಾದವನ್ನು ಎಲ್ಲ ಶಾಸಕರೂ ಉದಾರ ದೃಷ್ಟಿಯಿಂದ ನೋಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಸಾಹಿತ್ಯ ಸಾಹಿತಿಗಳಿಗಷ್ಟೇ ಮೀಸಲಿಲ್ಲ. ಸಾಮಾಜಿಕ ಬದುಕಿಗೆ ರಾಜಕಾರಣಿಗಳು ಬೇಕಾದ ಭೌತಿಕ ಸವಲತ್ತುಗಳನ್ನು ಒದಗಿಸಿದರೆ, ಸಾಹಿತಿಗಳು ನೈತಿಕ ಸತ್ವವನ್ನು ತುಂಬುತ್ತಾರೆ. ಅನೇಕ ಶಾಸಕರು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಸಾಹಿತಿಗಳು ರಾಜಕೀಯ ಕ್ಷೇತ್ರದಲ್ಲೂ ಇರಬಹುದು. ಇದರಲ್ಲಿ ಭಿನ್ನಭಾವ ದೃಷ್ಟಿಗೆ ಅವಕಾಶವಿಲ್ಲ. ರಾಜಕಾರಣಿಗಳು ಮತ್ತು ಸಾಹಿತಿಗಳು ಇಬ್ಬರೂ ಕೂಡಿ ಸಮಷ್ಟಿ ಹಿತದ ರಕ್ಷಣೆ ನೋಡಿಕೊಳ್ಳಬೇಕಾಗುತ್ತದೆ.

ಹೀಗಿರುವಾಗ ರಾಜಕಾರಣಿಗಳನ್ನು ಸಾಹಿತಿಗಳು 'ಅಸ್ಪೃಶ್ಯ' ರಂತೆ ಕಾಣುವ ಪ್ರಶ್ನೆಯೇ ಇಲ್ಲ. ಈ ಘಟನೆ ನಡೆದ ಸಂದರ್ಭದಲ್ಲಿ ವೇದಿಕೆಯ ಮೇಲೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಕನ್ನಡ ಸಂಸ್ಕೃತಿ ಸಚಿವರು, ಪಶುಸಂಗೋಪನಾ ಸಚಿವರು, ಸಮ್ಮೇಳನಾಧ್ಯಕ್ಷರು, ಸ್ವಾಗತ ಸಮಿತಿಯ ಪದಾಧಿಕಾರಿಗಳು ಎಲ್ಲರೂ ಇದ್ದರು. ಆಕಸ್ಮಿಕವಾಗಿ ಆದ ಲೋಪ ಸರಿಪಡಿಸಲು ಅವಕಾಶವೇ ಇರಲಿಲ್ಲ. ಒಬ್ಬ ನಿರೂಪಕರಿಂದಾದ ಅಚಾತುರ್ಯದಿಂದಾಗಿ ಈ ಪ್ರಸಂಗ ನಡೆದುಹೋಯಿತು. ಇದನ್ನು ನೆನೆದಾಗ ತುಂಬಾ ವ್ಯಸನವೆನಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಪ್ರಾತಿನಿಧಿಕ ಸಂಸ್ಥೆ. 79 ವರ್ಷಗಳ ಇತಿಹಾಸದಲ್ಲಿ ಅದು ಎಂದೂ ರಾಜಕಾರಣಿಗಳನ್ನು ವೃಥಾ ದೂರಿಲ್ಲ. ರಾಜ್ಯ ಸರ್ಕಾರದ ಬೆಂಬಲ ಮತ್ತು ನೆರವಿನಿಂದಲೇ ಇದು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಆಕಸ್ಮಿಕವಾಗಿ ಆಗಿಹೋದ ಘಟನೆಯನ್ನು ಮುಂದು ಮಾಡಿಕೊಂಡು ಸಾಹಿತಿಗಳೆಲ್ಲರ ಬಗ್ಗೆ ಅಗೌರವ ತೋರಿಸುವಂತಹ ಪರಿಸ್ಥಿತಿ ಉಂಟಾಗಬಾರದು.

ಶಾಸಕರಿಗೆ ಕರೆಯೋಲೆ ಕಳಿಸಿರಲಿಲ್ಲ ಎಂಬ ಮಾತು ಪ್ರಸ್ತಾಪವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸದಸ್ಯರಿಗೇ ಅಲ್ಲದೆ ಎಲ್ಲ ಶಾಸಕರು, ಲೋಕಸಭಾ ಸದಸ್ಯರು, ಸಚಿವರು, ಕೇಂದ್ರದಲ್ಲಿರುವ ಕನ್ನಡ ಸಚಿವರು, ಇಲಾಖೆಗಳ ಮುಖ್ಯರು, ಜಿಲ್ಲಾಧಿಕಾರಿಗಳು, ಸಾಹಿತಿಗಳು, ಪತ್ರಕರ್ತರು ಹೀಗೆ ಸುಮಾರು 16 ಸಾವಿರ ಜನಕ್ಕೆ

ಕರೆಯೋಲೆ ಕಳಿಹಿಸಿದೆ. ಕೆಲವು ಶಾಸಕರು ಮತ್ತು ಪ್ರಮುಖರು ಸಮ್ಮೇಳನದ ಯಶಸ್ಸಿಗೆ ಶುಭಕೋರಿ ಪತ್ರಗಳನ್ನೂ ಬರೆದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರದಿಂದ ಬರುತ್ತಿದ್ದ 30ಲಕ್ಷ ರೂ. ಅನುದಾನವನ್ನು 6ಕೋಟಿ ರೂ.ಗಳಿಗೆ ಹೆಚ್ಚಿಸಿರುವುದಾಗಿ ಶ್ರೀ ಜೀವರಾಜ್ ಆಳ್ವ ಅವರು ತಿಳಿಸಿದರೆಂದು ವರದಿಯಾಗಿದೆ. ಪರಿಷತ್ತಿಗೆ 30 ಲಕ್ಷ ರೂ. ಸಹಾಯ ಧನ ಯಾವ ವರ್ಷವೂ ದೊರಕಿಲ್ಲ. 30 ಲಕ್ಷ ರೂ.ಗಳೇ ದೊರಕದ ಮೇಲೆ 6 ಕೋಟಿ ರೂ.ಗಳ ಮಾತಂತೂ ದೂರವೇ ಉಳಿಯುತ್ತದೆ.

ನಾಡಿನ ಮೂಲೆ ಮೂಲೆಗೂ ಕನ್ನಡದ ವಾತಾವರಣವನ್ನು ಮೂಡಿಸಲು ಅಹರ್ನಿಶಿ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಈಗ ಜಿಲ್ಲಾ ಮತ್ತು ತಾಲ್ಲೂಕು ಪಂತಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸುತ್ತಿದೆ. ಈ ಎಲ್ಲ ಸಮ್ಮೇಳನಗಳಲ್ಲಿ ಆಯಾ ಭಾಗದ ಶಾಸಕರು ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಪಾಲುಗೊಳ್ಳುತ್ತಿದ್ದಾರೆ. ಅನೇಕ ಕಡೆ ಸ್ಥಳೀಯ ಶಾಸಕರೇ ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿದ್ದಾರೆ. ಇದನ್ನು ಗಮನಿಸಿದಾಗ ಪರಿಷತ್ತಿನಿಂದ ಶಾಸಕರುಗಳಿಗೆ, ಅವರ ಸ್ಥಾನಮಾನಕ್ಕೆ ಧಕ್ಕೆ ತರುವಂತಹ ಕೆಲಸ ಎಲ್ಲೂ ನಡೆದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಏನೇ ಇರಲಿ, ಈ ಆಕಸ್ಮಿಕ ಪ್ರಸಂಗಕ್ಕಾಗಿ ನಾನು ಮತ್ತೊಮ್ಮೆ ವಿಷಾದ ವ್ಯಕ್ತಪಡಿಸುತ್ತೇನೆ. ಮಾನ್ಯ ಶಾಸಕರಲ್ಲಿ ಕ್ಷಮೆ ಕೋರುತ್ತೇನೆ.

ಈ ವಿಷಯವನ್ನು ಇಷ್ಟಕ್ಕೆ ಬಿಟ್ಟು ಪರಸ್ಪರ ಸೌಹಾರ್ದದ ವಾತಾವರಣವನ್ನು ಮೂಡಿಸೋಣ.

ಇಂತು ಪ್ರಣಾಮಗಳು

ಗೊ.ರು. ಚನ್ನಬಸಪ್ಪ
ಅಧ್ಯಕ್ಷ

ಶ್ರೀ ಸಿ. ಬೈರೇಗೌಡ : ಮಾನ್ಯ ಸಭಾಧ್ಯಕ್ಷರೇ, ನಿಯಮ 68 ರ ಪ್ರಕಾರ ಎನ್.ಜಿ.ಇ.ಎಫ್. ಕಾರ್ಖಾನೆ ಬಗ್ಗೆ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದನ್ನು ಮೊದಲು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

1) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಮುಳುಗಡೆಯಾದ ಜಮೀನಿನಿಂದ ಸಾವಿರಾರು ಕುಟುಂಬಗಳಿಗೆ ಅನ್ಯಾಯ.

ಅಧ್ಯಕ್ಷರು : ಪಟ್ಟಣಶೆಟ್ಟಿಯವರೇ, ನೀವು ಎರಡು ನಿಮಿಷಗಳಲ್ಲಿ ಕೇಳಿ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಿಲಗುಂದ ಸ್ವಾಮಿಗಳು ಯು.ಕೆ.ಪಿ.ಯಲ್ಲಿ ಆದ ನೇಮಕಾತಿ ಬಗ್ಗೆ ಸುಮಾರು ಹದಿನೈದು ದಿನಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಮೂರು-ನಾಲ್ಕು ದಿವಸಗಳಿಂದ ಅವರು ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಯು.ಕೆ.ಪಿ.ಯಲ್ಲಿ ಮುಳುಗಡೆಯಾದ ಜಾಗ ಜಮಿನು ಬಿಜಾಪುರ ಜಿಲ್ಲೆಯದ್ದು. ಮೂರು-ನಾಲ್ಕು ಲಕ್ಷ ಎಕರೆ ಮುಳುಗಡೆಯಾಗಿ